ESI.A.No.62/2019

AW-1,

ದಿನಾಂಕಃ 10-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ.SWK ವಕೀಲರಿಂದ

2012 ರಿಂದ ಸಾಯಿ ಅಸೋಶಿಯೇಟ್ಸ ಸಂಸ್ಥೆಯು ಅಸ್ತಿತ್ವದಲ್ಲಿದೆ. ನಾವು ಲೇಬರ್ ಕಾಂಟ್ರಾಕ್ಟ್ ಕೆಲಸವನ್ನು ಮಾಡುತ್ತೇವೆ. ದಿಃ1-1-2012 ರಂದು ನಾನು ಖುದ್ದಾಗಿ ಇ ಎಸ್ ಐ ಕೋಡನ್ನು ಪಡೆದುಕೊಂಡೆ ಎಂದರೆ ಸರಿಯಾಗಿ ನೆನಪಿಲ್ಲ. ಆ ಸಮಯದಲ್ಲಿ ನಾನು ಅಡ್ವಾನ್ಸ ಹಣವಾಗಿ ರೂ.30,000-00 ಗಳನ್ನು ಪಾವತಿ ಮಾಡಿದ್ದೆ ಎಂದರೆ ನಿಜ. ನಮ್ಮ ಸಂಸ್ಥೆಯನ್ನು ತಕ್ಷಣ ನಾನು ಮುಚ್ಚಿದೆ. ನಮ್ಮ ಸಂಸ್ಥೆಯನ್ನು ಆರಂಭಿಸಬೇಕಾದರೆ ಹಲವು ಲೈಸನ್ಸಗಳನ್ನು ಪಡೆದುಕೊಂಡಿದ್ದೆ. ನಮ್ಮ ಸಂಸ್ಥೆ ಮುಚ್ಚಿಹೋಗಿದೆ ಎಂದು ತೋರಿಸಲು ದಾಖಲಾತಿಗಳು ಇರುವುದಿಲ್ಲ. 2012 ರಲ್ಲಿ ನಮ್ಮ ಸಂಸ್ಥೆ ಮುಚ್ಚಿಹೋಗಿದೆ ಎಂದು ಇ ಎಸ್ ಐ ಕಾರ್ಪೋರೇಶನ್ನಿಗೆ ನಾನು ತಕ್ಷಣ ತಿಳಿಸಿರಲಿಲ್ಲ. ಇ ಎಸ್ ಐ ಕೋಡ್ ಪಡೆಯಬೇಕಾದರೆ 19 ಜನ ಕಾರ್ಮಿಕರು ಇದ್ದಾರೆ ಎಂದು ತಿಳಿಸಿದ್ದೆ ಎಂದರೆ ನಿಜ. ದಿಃ30-11-2017 ರಂದು ನವಂಬರ್-2013 ರಿಂದ ಡಿಸೆಂಬರ್ 2016 ರವರೆಗೆ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ಸಿ-18 ಅದಾಕ್ ನೋಟೀಸ್ ನನಗೆ ಬಂದಿತ್ತು ಎಂದರೆ ನಿಜ. ಆ ನೋಟೀಸಿನಲ್ಲಿ ರೂ.2,03,775-00 ಗಳನ್ನು ಏತಕ್ಕೆ ವಸೂಲಿ ಮಾಡಬಾರದು ಎಂದು ತಿಳಿಸಿದ್ದರು ಎಂದರೆ ಗೊತ್ತಿಲ್ಲ. ದಿಃ26-12-2017 ರಂದು ಖುದ್ದು ಸುನಾವಣೆಗೆ ಹಾಜರಾಗುವಂತೆ ನಮಗೆ ತಿಳಿಸಿದ್ದರು ಎಂದರೆ ಗೊತ್ತಿಲ್ಲ. ಆ ಖುದ್ದು ಸುನಾವಣೆಯಲ್ಲಿ ಲೆಡ್ಜರ್, ಕ್ಯಾಷ್ ಬುಕ್ , ಬಿಲ್ಸ್ , ವೋಚರ್ಸ , ಆಡಿಟೆಡ್ ಬ್ಯಾಲೆನ್ಸ ಶೀಟ್ ಮತ್ತು ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಗಳನ್ನು ಹಾಜರುಪಡಿಸುವಂತೆ ತಿಳಿಸಲಾಗಿತ್ತು ಎಂದರೆ ಸರಿಯಲ್ಲ. ಖುದ್ದು ಸುನಾವಣೆಗೆ ನನ್ನ ಕಡೆಯಿಂದ ಯಾರೂ ಹಾಜರಾಗಿರಲಿಲ್ಲ ಎಂದರೆ ನಿಜ. ದಿಃ19-1-2018 ರಂದು ಖುದ್ದು ಸುನಾವಣೆಗೆ ಇನ್ನೊಂದು ದಿನಾಂಕವನ್ನು ನಿಗಧಿಪಡಿಸಲಾಯಿತು ಎಂದರೆ ಗೊತ್ತಿಲ್ಲ. ಆ ದಿನವೂ ಕೂಡ ಯಾರೂ ಹಾಜರಾಗಿಲ್ಲ ಎಂದು 45 ಎ ಆದೇಶವನ್ನು ಹೊರಡಿಸಲಾಯಿತು ಎಂದರೆ ಗೊತ್ತಿಲ್ಲ. ಖುದ್ದು ಸುನಾವಣೆಗೆ ನನ್ನ ಬದಲಾಗಿ ಬೇರೆಯವರನ್ನು ಕಳುಹಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. 2012 ರಿಂದ ನನಗೆ ಯಾವುದೇ ಲೇಬರ್ ಕಾಂಟ್ರಾಕ್ಟ ಇರಲಿಲ್ಲ ಎಂಬ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕೋಡ್ ನಂಬರ್ ಪಡೆಯಬೇಕಾದರೆ ಕಾರ್ಮಿಕರ ನೇಮಕಾತಿ ಆದೇಶಗಳನ್ನು ಹಾಜರುಪಡಿಸಿರಲಿಲ್ಲ. ನಿಶಾನೆ ಎ-4 ರಲ್ಲಿ ತೋರಿಸಿರುವ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಯಿ ಅಸೋಶಿಯೇಟ್ಸ ಎಂಬುದು ಸೋಲ್ ಪ್ರೊಪ್ರೈಟರ್ ಶಿಪ್ ಆಗಿರುತ್ತದೆ. ಈ ಕೇಸಿಗೋಸ್ಕರ ದಾಖಲಾತಿಗಳನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ESI.A.No.62/2019

AW-1,

ಎದುರುದಾರರು ನಿರ್ಧರಿಸಿರುವ ಬಾಕಿ ವಂತಿಗೆಯು ಸರಿಯಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್‌ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.